# ದಿನಾಂಕ:29-05-2010 ರಂದು ನಡೆದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಸಭೆಯ ನಡವಳಿಗಳು

## ವಿಷಯದ ಸಂಖ್ಯೆ:650/2009-10

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಡಾ|| ರಾಜ್‌ಕುಮಾರ್ ರಸ್ತೆಯ ಸಿಗ್ನಲ್ ಮುಕ್ತ ಸಂಚಾರಕ್ಕಾಗಿ ವೀವೇಕಾನಂದ ಕಾಲೇಜ್ ಜಂಕ್ಷನ್ ಬಳಿ ಅಂಡರ್‌ಪಾಸ್ ನಿರ್ಮಾಣ ಮಾಡಲು 3.00x2.20x1.0m ಅಳತೆಯ RCC Cellular Box ಅನ್ನು ಸಂಗ್ರಹಿಸಿ ಸರಬರಾಜು ಮಾಡುವ ರ ಕಾಮಗಾರಿಗೆ ಅಂದಾಜು ಪಟ್ಟಿಯನ್ನು ರೂ.160.20 ಲಕ್ಷಗಳಿಗೆ ತಯಾರಿಸಲಾಗಿದ್ದು, ಸದರಿ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆಯನ್ನು ಪಡೆಯಲಾಗಿರುತ್ತದೆ. ನಂತರದಲ್ಲಿ ಸದರಿ ಕಾಮಗಾರಿಗೆ 157.70 ಲಕ್ಷಗಳಿಗೆ ಟೆಂಡರ್ ಕರೆಯಲಾಗಿದ್ದು, ಸದರಿ ಟೆಂಡರ್‌ನಲ್ಲಿ ಗುತ್ತಿಗೆದಾರರಾದ ಶ್ರೀ.ಜೆ.ಸಿ. ಪ್ರಕಾಶ್ ಮತ್ತು ಶ್ರೀ.ಎಂ.ಅಶ್ವಥ್ ನಾರಾಯಣ ರವರು ಭಾಗವಹಿಸಿದ್ದು, ಈ ಇಬ್ಬರು ಗುತ್ತಿಗೆದಾರರು ತಾಂತ್ರಿಕ ಬಿಡ್‌ಗಳ ಮೌಲ್ಯಮಾಪನದಲ್ಲಿ ಅರ್ಹರಾದ ಮೇರೆಗೆ, ಸದರಿಯವರ ಆರ್ಥಿಕ ಬಿಡ್‌ಗಳನ್ನು ತೆರೆದು ತುಲಾನಾತ್ಮಕ ಪಟ್ಟಿಯನ್ನು ತಯಾರಿಸಲಾಗಿದ್ದು, ವಿವರಗಳು ಕೆಳಕಂಡಂತಿವೆ;

1. ಶ್ರೀ.ಜೆ.ಸಿ.ಪ್ರಕಾಶ್ ರವರು ರೂ.1,73,44,800/- ಗಳನ್ನು ನಮೂದಿಸಿದ್ದು, ಇದನ್ನು 2008-09ನೇ ಸಾಲಿನ ದರಗಳಿಗೆ ಹಾಗೂ ಪ್ರಸಕ್ತ ಸಾಲಿನ ದಿ:20/02/2009 ರ ಮಾರುಕಟ್ಟೆ ದರಗಳಿಗೆ ಹೋಲಿಸಿದಾಗ ಶೇ.17.86 ರಷ್ಟು ಹೆಚ್ಚುವರಿಯಾಗಿರುತ್ತದೆ ಹಾಗೂ 2009-10ನೇ ಸಾಲಿನ ಅಂದಾಜು ಪಟ್ಟಿಯ ದರಗಳಿಗೆ ಹೋಲಿಸಿದಾಗ ಶೇ.20.63% ರಷ್ಟು ಹೆಚ್ಚಾಗಿರುತ್ತದೆ.

2. ಶ್ರೀ.ಎಂ.ಅಶ್ವಥ್‌ನಾರಾಯಣ ರವರು ರೂ.1,83,96,000/- ಗಳನ್ನು ನಮೂದಿಸಿದ್ದು, ಇದನ್ನು 2008-09ನೇ ಸಾಲಿನ ದರಗಳಿಗೆ ಮತ್ತು ಪ್ರಸಕ್ತ ಸಾಲಿನ ದಿ:20/02/2009 ರ ಮಾರುಕಟ್ಟೆ ದರಗಳಿಗೆ ಹೋಲಿಸಿದಾಗ ಶೇ.25.00 ರಷ್ಟು ಹೆಚ್ಚುವರಿಯಾಗಿರುತ್ತದೆ ಹಾಗೂ 2009-10ನೇ ಸಾಲಿನ ಅಂದಾಜು ಪಟ್ಟಿಯ ದರಗಳಿಗೆ ಹೋಲಿಸಿದಾಗ ಶೇ.27.94% ರಷ್ಟು ಹೆಚ್ಚಾಗಿರುತ್ತದೆ.

ಸದರಿ ಕಾಮಗಾರಿಗೆ ಕನಿಷ್ಟ ದರ ನಮೂದಿಸಿರುವ ಗುತ್ತಿಗೆದಾರರಾದ ಶ್ರೀ.ಜೆ.ಸಿ.ಪ್ರಕಾಶ್ ರವರು ನಮೂದಿಸಿರುವ ರೂ.1,73,44,800/- ಗಳನ್ನು 2009-10ನೇ ಸಾಲಿನ ದರಗಳಿಗೆ ಹೋಲಿಸಿದಾಗ ಶೇ.20.63% ರಷ್ಟು ಹೆಚ್ಚುವರಿಯಾಗಿರುತ್ತದೆ. ತದರನ್ವಯ ಗುತ್ತಿಗೆದಾರರೊಂದಿಗೆ ಸಂಧಾನ ನಡೆಸಲಾಗಿ, ಸಂಧಾನದ ನಂತರ ಗುತ್ತಿಗೆದಾರರು ಶೇ.14.50% ರಷ್ಟು ಹೆಚ್ಚುವರಿ ಮೊತ್ತಕ್ಕೆ ಕಾಮಗಾರಿಯನ್ನು ನಿರ್ವಹಿಸಲು ಒಪ್ಪಿರುತ್ತಾರೆ. ಸದರಿ ಒಪ್ಪಿಗೆ ದರವು ಹೆಚ್ಚುವರಿಯಾಗಿರುವುದರಿಂದ, ಗುತ್ತಿಗೆದಾರರೊಡನೆ ಮರು ಸಂಧಾನ ನಡೆಸಲಾಗಿ, ಸದರಿಯವರು ಮರು ಸಂಧಾನದ ನಂತರ ಶೇ.14.50 ರಿಂದ 13.50 ರಷ್ಟು ಹೆಚ್ಚುವರಿ ಮೊತ್ತಕ್ಕೆ ಇಳಿಸಿ, ಒಪ್ಪಿಗೆ ನೀಡಿರುತ್ತಾರೆ. ಆದರೆ, ಈ ದರವು ಸಹ ಹೆಚ್ಚಿಗೆ ಅನ್ನಿಸಿದ್ದರ ಹಿನ್ನೆಲೆಯಲ್ಲಿ ಮತ್ತೊಮ್ಮೆ ಸಂಧಾನ ನಡೆಸಲು ಗುತ್ತಿಗೆದಾರರನ್ನು ಸಂಧಾನಕ್ಕೆ ಕರೆಯಲಾಗಿದ್ದು, ಗುತ್ತಿಗೆದಾರರು ದಿ:11/01/2010 ರ ತಮ್ಮ ಪತ್ರದಲ್ಲಿ ಮಾರುಕಟ್ಟೆಯಲ್ಲಿ ಕಟ್ಟಡ ಸಾಮಗ್ರಿ ಮತ್ತು ಕೂಲಿ ದರಗಳ ಏರುಪೇರಿನಿಂದಾಗಿ ಹಾಗೂ ಸದರಿ ಕಾಮಗಾರಿಯ ಕೆಲಸವನ್ನು ರಾತ್ರಿ ವೇಳೆಯಲ್ಲಿ ನಿರ್ವಹಿಸಬೇಕಾಗಿರುವುದರಿಂದ ಹಾಗೂ ಸದರಿ ಟೆಂಡರ್‌ನಲ್ಲಿ Price Variation Clause ಇಲ್ಲವಾದ್ದರಿಂದ, ದರವನ್ನು ಕಡಿಮೆ ಮಾಡಲು

ಸಾಧ್ಯವಿಲ್ಲವೆಂದು ತಿಳಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ, ಸದರಿ ಗುತ್ತಿಗೆದಾರರು ಈ ಹಿಂದೆ ಸಂಧಾನದಲ್ಲಿ ಒಪ್ಪಿರುವ ಶೇ.13.50 ರಷ್ಟು ಹೆಚ್ಚುವರಿ ದರವು ಸಮಂಜಸವಾಗಿದೆ ಎಂದು ಅಭಿಪ್ರಾಯಪಡಲಾಗಿರುತ್ತದೆ.

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ, ಸದರಿ ಕಾಮಗಾರಿಗೆ ಕನಿಷ್ಟ ದರ ನಮೂದಿಸಿರುವ ಗುತ್ತಿಗೆದಾರರಾದ ಶ್ರೀ.ಜೆ.ಸಿ.ಪ್ರಕಾಶ್ ರವರ ಸಂಧಾನಿತ ಗುತ್ತಿಗೆಯ ಮೊತ್ತ ರೂ.1,63,19,120.00 ಗಳಾಗಿದ್ದು, ಇದನ್ನು 2009–10ನೇ ಸಾಲಿನ ದರಗಳ ಮೊತ್ತ ರೂ.1,43,78,080.00 ಗಳಿಗೆ ಹೋಲಿಸಿದಾಗ ಬಂದಂತಹ ಶೇ.13.50% ರಷ್ಟು ಹೆಚ್ಚುವರಿ ಟೆಂಡರ್‌ಗೆ ಅನುಮೋದನೆ ಕೋರಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:05–05–2010ರ ಟಿಪ್ಪಣಿ.

ಆಡಳಿತ ಪಕ್ಷದ ನಾಯಕರಾದ ಶ್ರೀ ಬಿ.ಎಸ್. ಸತ್ಯನಾರಾಯಣರವರು ಕೆಳಕಂಡ ನಿರ್ಣಯವನ್ನು ಮಂಡಿಸಿದರು

ನಿರ್ಣಯ:– ದಿನಾಂಕ: 05–05–2010ರ ಆಯುಕ್ತರ ಟಿಪ್ಪಣಿಯನ್ನು ಒಪ್ಪುವುದು.

ಶ್ರೀ ಬಿ.ಎಸ್. ಸತ್ಯನಾರಾಯಣರವರು ಮಂಡಿಸಿದ ನಿರ್ಣಯವನ್ನು ಶ್ರೀ ಪಿ.ಎನ್. ಸದಾಶಿವರವರು ಅನುಮೋದಿಸಿದರು

ಮಹಾಪೌರರು ನಿರ್ಣಯವನ್ನು ಮತಕ್ಕೆ ಹಾಕಲಾಗಿ ಸಭೆಯು ಬಹುಮತದಿಂದ ಒಪ್ಪಿದೆ ಎಂದು ತೀರ್ಮಾನಿಸಿತು.

ನಿರ್ಣಯ:– ದಿನಾಂಕ: 05–05–2010ರ ಆಯುಕ್ತರ ಟಿಪ್ಪಣಿಯನ್ನು ಒಪ್ಪುವುದು.

ಎಸ್.ಕೆ. ನಟರಾಜ

(ಎಸ್.ಕೆ.ನಟರಾಜು)

ಮಹಾಪೌರರು